ಏಕಾಂಗಿ ಆಗಿಬಿಟ್ಟನಲ್ಲ ಅಂವಾ... ಬೇರೆ ಯಾರದ್ದೂ ಆಗಿಬಿಡಬಹುದಾದ ಬದುಕಿನ ಈ ದುರಂತ ನನ್ನನ್ನ ತೀರಾ ಅಲ್ಲಾಡಿಸಿಬಿಟ್ಟಿದೆ'. ಮೇಗಲೆ ಹಣೆಯನ್ನು ಒತ್ತಿಕೊಂಡಳು. ಟಿಶ್ಯೂ ಪೇಪರಿನಿಂದ ಕಣ್ಣಂಚು ಒರೆಸಿಕೊಂಡಳು.

ಆ ಹೆಣ್ಣುಮಗಳು ಹೇಳಿದಳಲ್ಲ, ಬಡವರಿಗೆ ಕೆಲವೊಮ್ಮೆ ಕಣ್ಣೀರಿಗೂ ಬಡತನ ಅಂತ... ಖಿನ್ನತೆಯೂ ಒಂಥರದ ಲಕ್ಷುರಿಯೇ... ಹೀಗೆ ಖಿನ್ನತೆಯನ್ನು ಹದವಾದ ಮಸಾಲಾ ಟೀಯೊಂದಿಗೆ ಗುಟುಕರಿಸುತ್ತಾ, ಗಂಟಲಿಗೆ ಹಿತವಾಗಿ ಒಳಗಿಳಿಸಿಕೊಳ್ಳುವುದು ಆ ಹೆಣ್ಣು ಮಗಳಂಥವರಿಗೆ ಎಂದಿಗೂ ದಕ್ಕದ ಲಕ್ಷುರಿಯೇ ಅಲ್ಲವೇ ಎಂದು ವಿನುತಾ ತನ್ನೊಳಗೇ ಕೇಳಿಕೊಳ್ಳುತ್ತ... ಖಿನ್ನತೆ, ಒಂಟಿತನವನ್ನು ಎಲ್ಲಿಯೇ ಕೂತು ಹೇಗೆ ಗುಟುಕರಿಸಿದರೂ ಒಳಗಿಳಿದ ನಂತರ ಅದರ ಚಕ್ರಸುಳಿ ಒಂದೇ ತಾನೆ ಎಂದೂ ಅನ್ನಿಸುತ್ತ, ಕೊನೆಗೂ ಎಲ್ಲವೂ ಸಾಪೇಕ್ಷವೇ ತಾನೇ ಎಂದು ತನ್ನೊಳಗನ್ನು ಸಮಾಧಾನಿಸಿಕೊಂಡಳು. ಎರಡು ನಿಮಿಷ ಇಬ್ಬರೂ ಮಾತಾಡಲಿಲ್ಲ. ವಿನುತಾಳ ಫೋನು ರಿಂಗ್ ಆಗುತ್ತಿತ್ತು. 'ಓ.. ರಮೇಶ ಫೋನು ಮಾಡಿದಾನೆ' ಎನ್ನುತ್ತಾ, ಒಂದೇ ನಿಮಿಷ ಇರು, ಎಂದು ಫೋನು ಕಿವಿಗಿಟ್ಟಳು.'ನೀನು ಎಲ್ಲಿದೀಯಾ, ಲೊಕೇಶನ್ ಕಳಿಸು. ರೆಸಿಡೆನ್ಸಿ ರೋಡ್ ಅಂದ್ರೆ ನಮ್ಮ ಆಫೀಸಿನಿಂದ ತುಂಬ ದೂರವೇನಿಲ್ಲ. ಇಬ್ಬರೂ ಜೊತೆಗೆ ಹೋಗಬಹುದು' ಎಂದ. 'ಅಯ್ಯೋ... ಹೌದು ಅಲ್ಲವಾ... ನಿನ್ನ ಆಫೀಸ್ ಇಲ್ಲೇ ಹತ್ರ ಇದೆ ಅನ್ನದು ನಂಗೆ ನೆನಪೇ ಇರಲಿಲ್ಲ...' ವಿನುತಾ ರಾಗವೆಳೆಯುತ್ತ 'ಇರು ಕಳಿಸ್ತೀನಿ. ಈ ಚಾಯ್ ಪಾಯಿಂಟ್ ಇರೋ ರಸ್ತೆ ಒನ್‌ವೇ ಇದ್ದಂಗೆ ಇದೆ. ಆಹಾ... ಇವತ್ತು ಬೆಳಗ್ಗೆ ಆಫೀಸಿಗೂ ಬಿಟ್ಟು, ಈಗ ವಾಪಾಸು ಕರಕೊಂಡೂ ಹೋಗತೀಯ ಅಂದರೆ ನಾಳೆ ಸೂರ್ಯ ಹುಟ್ಟಲ್ಲ ಬಿಡು', ವಾಟ್ಸಾಪಿನಲ್ಲಿ ಲೊಕೇಶನ್ ಕಳಿಸುತ್ತಲೇ ಹೇಳುತ್ತ ನಕ್ಕಳು. 'ಹೊಟ್ಟೆನೋವು ಅಂತಿದ್ದೆಯಲ್ಲ, ಅದಕ್ಕೆ ಪಾಪ ಇವತ್ತೊಂದು ದಿನ ಮಹಾರಾಣಿಯವರ ಸೇವೆ ಮಾಡಿಬಿಡಣ ಅಂತ... ಇರು ಲೊಕೇಶನ್ ನೋಡಿ ಹೇಳತೀನಿ. ಮತ್ತೆ ಹೆಂಗಿದಾರೆ ಮೇಗಲೆಯವರು...' ಎಂದು ಕೇಳುತ್ತಲೇ, ಇವಳು ಕಳಿಸಿದ ಲೊಕೇಶನ್ ನೋಡಿ, 'ಅಯ್ಯೋ... ಹೌದು ಕಣೇ, ಅದು ಒನ್‌ವೇ... ಒಂದ್ ಕೆಲಸ ಮಾಡು, ನೀನು ಅಲ್ಲಿಂದ ಮುಂದೆ ಸ್ವಲ್ಪ ದೂರ ನಡಕೊಂಡು ಬಾ. ಮುಂದೆ ಒಂದು ಸರ್ಕಲ್ ಇದೆ, ಅಲ್ಲಿ ಲೆಫ್ಟ್ ತಗೊಂಡು ನಿಂತಿರು. ನಾ ಅಲ್ಲಿಗೆ ಬರತೀನಿ. ಅಕಸ್ಮಾತ್ ನಾನು ಮೊದಲು ಬಂದರೆ, ಅಲ್ಲೇ ಸ್ವಲ್ಪ ಮುಂದೆ ಎಡಗಡೆ ಸೈಡಲ್ಲಿ ಕಾರು ನಿಲ್ಲಿಸಿರತೀನಿ. ಇಲ್ಲಿಂದ ನಂಗೆ ಸುಮಾರು ಅರ್ಧ ಗಂಟೆ ಆಗುತ್ತೆ' ಎಂದ. 'ಸರಿ, ಈಗ ಐದೂವರೆ... ಆರುಗಂಟೆಗೆ ನಾ ಅಲ್ಲಿರತೀನಿ' ಎಂದು ಫೋನಿಟ್ಟಳು.



ಇವರಿಬ್ಬರ ಕೊಂಗಾಟದ ಮಾತುಕತೆಯನ್ನು ಕೇಳಿಸಿಕೊಳ್ಳುತ್ತ, ವಿನುತಾಳ ಮೊಗದಲ್ಲಿ ಹರಡಿದ ಮಂದಹಾಸವನ್ನು ನೋಡುತ್ತಾ, ಬದುಕು ತನ್ನನ್ನು ಮಾತ್ರವೇ ಇಂಥದೆಲ್ಲ ಕ್ಷಣಗಳಿಂದ ಶಾಶ್ವತವಾಗಿ ವಂಚಿಸಿ ಬಿಟ್ಟಿತಲ್ಲ ಎನ್ನಿಸುತ್ತಾ ಮೇಗಲೆಗೆ ಕಣ್ಣಂಚು ಒದ್ದೆಯಾಗುತ್ತಾ, ಹೊಟ್ಟೆ ಯಾಳದಿಂದ ಒದ್ದು ಕೊಂಡು ಬಂದ ಸಂಕಟವನ್ನು ಒಳಗೇ ಅಡಗಿಸಲೆತ್ನಿಸುತ್ತ ಎದ್ದು ನಿಂತಳು. 'ಇಲ್ಲಿ ಇನ್ನೊಂದು ಸ್ವಲ್ಪ ಹೊತ್ತು ಕೂತುಕೋಬೇಕು ಅಂದರೆ ಎರಡನೇ ರೌಂಡ್ ಟೀ ಹೇಳಬೇಕು' ಎನ್ನುತ್ತ ಮತ್ತೆರಡು ಟೀ ಆರ್ಡರ್ ಹೇಳಿದವಳು, ಇನ್ನೊಂದು ಅರ್ಧ ಗಂಟೆ ಕೂತಿರತೇವೆ ಎಂದು ಕೌಂಟರಿನಲ್ಲಿದ್ದವನಿಗೆ ಹೇಳಿ ಬಂದಳು.

'ಕೇರಳದ ಕಾಕಾ ಇವನು. ಈ ಚಾಯ್ ಪಾಯಿಂಟಿಗೆ ಆರು ವರ್ಷ ಆಯಿತಂತೆ. ಕೋವಿಡ್ ಸಮಯದಲ್ಲಿ ವ್ಯಾಪಾರ ಡೌನ್ ಆಗಿತ್ತು ಅನ್ನೋದನ್ನು ಬಿಟ್ಟರೆ, ಒಟ್ಟಾರೆ ವ್ಯಾಪಾರಕ್ಕೇನೂ ಕೊರತೆಯಿಲ್ಲ ಅಂತಾನೆ'